# ‘ಆಹಾರ ಪ್ರಿಯರ ಸ್ವರ್ಗ’

ಸಾಮಾನ್ಯವಾಗಿ ವಿದೇಶಗಳಿಂದ ಇಲ್ಲಿಗೆ ಬಂದವರಿಗೆ ಭಾರತ ಬೇರೆ ಬೇರೆ ಕಾರಣಗಳಿಗೆ ಬಹಳ ಇಷ್ಟವಾಗುತ್ತದೆ. ಕೆಲವರಿಗೆ ಇಲ್ಲಿನ ಹವಾಮಾನ, ವಾತಾವರಣ ಹಿಡಿಸಿದರೆ ಇನ್ನು ಕೆಲವರಿಗೆ ಉದ್ಯೋಗಾವಕಾಶ ಕೈ ಹಿಡಿಯುತ್ತದೆ. ಮತ್ತೆ ಕೆಲವರನ್ನು ಇಲ್ಲಿನ ಶಿಕ್ಷಣ ವ್ಯವಸ್ಥೆ ಕೈಬೀಸಿ ಕರೆಯುತ್ತದೆ. ಇನ್ನೂ ಕೆಲವರಿಗೆ ಇಲ್ಲಿನ ಊಟೋಪಚಾರವೇ ಎಲ್ಲದಕ್ಕೂ ಮೇಲ್ಪಂಕ್ತಿ ಹಾಕಿ ಖಾಯಂ ಆಗಿ ನೆಲೆಸಲು ಪ್ರೇರೇಪಿಸುತ್ತದೆ.

ಜಪಾನ್‌ನಿಂದ ಬಂದ ರೀನಾ ಮತ್ತು ಕೆಂಜಿ ಮಕಿ ದಂಪತಿಗೆ ಇಲ್ಲಿನ ಆಹಾರ ಪದ್ಧತಿ ಸಖತ್ತಾಗಿ ಹಿಡಿಸಿದೆಯಂತೆ. ಜಪಾನ್‌ನಿಂದ 2015ರ ಜುಲೈಯಲ್ಲಿ ಭಾರತಕ್ಕೆ ಬಂದದ್ದೇ ತಮ್ಮ ಜೀವನದ ಮಹತ್ವದ ತಿರುವು ಎಂಬುದು ಇವರಿಬ್ಬರ ಅಭಿಪ್ರಾಯ. ಇವರಿಬ್ಬರೂ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

ರೀನಾ ಇಲ್ಲಿಗೆ ಬಂದು ಮೊದಲು ಮಾಡಿದ ಕೆಲಸ ಎಂದರೆ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್‌ಗೆ ಸೇರಿದ್ದು. ಏಕೆಂದರೆ ಇಲ್ಲಿನ ಜನರ ಇಂಗ್ಲಿಷ್ ಭಾಷಾ ಉಚ್ಚಾರ ಬೇರೆ. ಬಹಳ ವೇಗವಾಗಿ ಮಾತನಾಡುತ್ತಾರೆ. ಅದನ್ನು ಅನುಸರಿಸುವುದು, ಅರ್ಥ ಮಾಡಿಕೊಳ್ಳುವುದು ಕಷ್ಟ ಎಂಬ ಕಾರಣಕ್ಕೆ ರೀನಾ ಇಂಗ್ಲಿಷ್ ಕೋರ್ಸ್‌ಗೆ ಸೇರಿ ಸಂವಹನ ಕಲೆ ಅಭಿವೃದ್ಧಿಪಡಿಸಿಕೊಂಡರು.

‘ಕಚೇರಿಯಲ್ಲಿ ಕೆಲಸ ಮಾಡುವಾಗ ಸಹೋದ್ಯೋಗಿಗಳು ಬಹಳ ಸಹಕರಿಸುತ್ತಾರೆ. ಮಾತನಾಡುವಾಗ ತಪ್ಪಿದರೆ ಕೂಡಲೇ ಸರಿ ಮಾಡುವಂತೆ ಸೂಚಿಸುತ್ತಾರೆ. ಹೀಗಾಗಿ ಇಲ್ಲಿ ಭಾಷಾ ಸಮಸ್ಯೆ ಉದ್ಭವಿಸಲೇ ಇಲ್ಲ’ ಎನ್ನುತ್ತಾರೆ ರೀನಾ.

ಇಲ್ಲಿನ ಉಡುಗೆ–ಉಡುಪುಗಳ ಬಗ್ಗೆ ಪ್ರತಿಕ್ರಿಯಿಸುವ ರೀನಾ, ‘ಭಾರತೀಯರ ಉಡುಪು ವಿನ್ಯಾಸ ಬಹಳ ಆಕರ್ಷಕವಾಗಿದೆ. ಸೀರೆ, ಸಲ್ವಾರ್ ವೈವಿಧ್ಯಮಯವಾಗಿದೆ. ನನಗೂ ಹೊಲಿಗೆ ಕಲಿತು ನಮ್ಮ ಉಡುಪುಗಳನ್ನು ನಾವೇ ತಯಾರು ಮಾಡಿಕೊಳ್ಳಬೇಕು ಎಂಬ ಆಸೆ. ಸದ್ಯದಲ್ಲೇ ಹೊಲಿಗೆ ತರಬೇತಿಗೂ ಸೇರಬೇಕೆಂದಿದ್ದೇನೆ’ ಎಂಬುದು ರೀನಾ ಮಹತ್ವಾಕಾಂಕ್ಷೆ.

‘ಇಲ್ಲಿನ ಆಹಾರ ಪದ್ಧತಿಯೂ ವಿಭಿನ್ನ. ಊಟ ತಿಂಡಿಗಳು ಬಹಳ ರುಚಿಕರ. ಸಸ್ಯಾಹಾರದಲ್ಲೇ ನೂರಾರು ವೈವಿಧ್ಯ. ರುಚಿಯಲ್ಲೂ ಒಂದಕ್ಕಿಂತ ಒಂದು ವಿಭಿನ್ನ. ಸ್ವಚ್ಛವಾದ ರುಚಿಕರ ತರಕಾರಿ ಸಿಗುತ್ತದೆ. ನಾನು ಅಡುಗೆಯಲ್ಲಿ ಹೆಚ್ಚಾಗಿ ಟೊಮ್ಯಾಟೊ ಬಳಸುತ್ತೇನೆ. ಜಪಾನಿನವರು ಬಳಸುವ ಮಸಾಲೆಗಳನ್ನು ಬಳಸಿ ಅಡುಗೆ ಮಾಡುತ್ತೇನೆ. ಅಲ್ಲದೆ ಇಲ್ಲಿ ಜಪಾನಿ ತಿನಿಸುಗಳೂ ಬೇಕಾದಷ್ಟು ಸಿಗುತ್ತವೆ. ಬೆಂಗಳೂರು ಒಂದು ರೀತಿಯಲ್ಲಿ ‘ಆಹಾರ ಪ್ರಿಯರ ಸ್ವರ್ಗ’ ದಂತಿದೆ’ ಎಂದು ವಿವರಿಸುತ್ತಾರೆ ರೀನಾ.

‘ಇಲ್ಲಿಗೆ ಬಂದ ಹೊಸದರಲ್ಲಿ ದಿನಾ ಬೆಳಿಗ್ಗೆ ಪೆಪ್ಸಿ–ಕೋಕ ಕೋಲ ಕುಡಿಯುತ್ತಿದ್ದೆವು. ಇಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳಲು ಪೆಪ್ಸಿ ಒಳ್ಳೆಯದು ಅಂತ ಸ್ನೇಹಿತರು ಹೇಳಿದ್ದರು. ಆಮೇಲೆ ಆರೋಗ್ಯಕ್ಕೆ ತೊಂದರೆಯಾಗಲು ಶುರುವಾಯಿತು. ಆಗ ನಮ್ಮ ಕಾರಿನ ಚಾಲಕ ಪೆಪ್ಸಿ–ಕೋಕ ಕೋಲ ಬಿಟ್ಟು ಎಳನೀರು ಕುಡಿಯಿರಿ ಎಂದು ಸಲಹೆ ನೀಡಿದ. ಈಗ ನಿತ್ಯವೂ ಎಳನೀರು ಕುಡಿಯುತ್ತೇವೆ. ಹೀಗಾಗಿ ಈಗ ಆರೋಗ್ಯ ಸಮಸ್ಯೆ ಕಾಡುತ್ತಿಲ್ಲ’ ಎಂದೂ ಹೇಳುತ್ತಾರೆ ಈ ಜಪಾನಿ ದಂಪತಿ.

‘ಬಿಡುವಿನ ವೇಳೆಯಲ್ಲಿ ಜಿಮ್, ಈಜು, ಗಾಲ್ಫ್ ಆಡುವುದರಲ್ಲಿ ಕಾಲ ಕಳೆಯುತ್ತೇವೆ. ಭಾನುವಾರ ಸಂಜೆ ಸ್ನೇಹಿತರೆಲ್ಲ ಸೇರಿ ಔತಣಕೂಟ ಏರ್ಪಡಿಸಿ ಖುಷಿ ಪಡುವುದೂ ಇದೆ’ ಎನ್ನುವ ಇವರಿಗೆ ಕಬ್ಬನ್ ಪಾರ್ಕ್, ಬುಲ್ ಟೆಂಪಲ್, ಶಿವಾಜಿನಗರ, ಮಾಲ್‌ಗಳನ್ನು ಸುತ್ತುವುದು ರೀನಾ ಹಾಗೂ ಕೆಂಜಿ ಅವರ ಪ್ರಿಯವಾದ ಹವ್ಯಾಸವಂತೆ. ಶಾಪಿಂಗ್ ಮಾಡುವುದು ಕೂಡ ಇಷ್ಟವಂತೆ.

ಪ್ರವಾಸ ಹೋಗುವುದದನ್ನು ಕೆಂಜಿ ದಂಪತಿ ಇಷ್ಟಪಡುತ್ತಾರೆ. ಈಗಾಗಲೇ ಹಂಪಿ, ಚೆನ್ನೈ, ಪುದುಚೇರಿ ನೋಡಿ ಬಂದಿರುವ ಇವರು, ಆಗ್ರಾ, ಹೈದ್ರಾಬಾದ್, ಕೇರಳ, ಕೊಡಗು ಮುಂತಾದ ಜಾಗಗಳನ್ನು ನೋಡುವ ಯೋಜನೆ ಹಾಕಿಕೊಂಡಿದ್ದಾರೆ.



ಜಪಾನ್‌ನಿಂದ ಬಂದ ಕೆಂಜಿ ಮಕಿ ಹಾಗೂ ರೀನಾ ದಂಪತಿ

ಜಪಾನಿನ ಜನ ತಾಳ್ಮೆ ಹಾಗೂ ವಿನಯವಂತರು ಎಂಬುದು ಇಲ್ಲಿನ ಬಹುತೇಕರ ಅಭಿಮತ. ಆದರೆ ಈ ದಂಪತಿ ಪ್ರಕಾರ ‘ಜಪಾನೀಯರು ಇಲ್ಲಿನವರು ಅಂದುಕೊಂಡಷ್ಟು ವಿನಯವಂತರಲ್ಲ. ಕಿರಿಕಿರಿ ಮಾಡುವ ಮಂದಿಯೇ ಹೆಚ್ಚು. ಹೊಂದಿಕೊಳ್ಳುವ ಸ್ವಭಾವ ಕಡಿಮೆ. ಆದರೆ ಇಲ್ಲಿನವರು ಬಹುಬೇಗ ಸ್ನೇಹಿತರಾಗಿ ಆತ್ಮೀಯರೂ ಆಗುತ್ತಾರೆ. ತಮ್ಮ ಕೈಲಾದ ಸಹಾಯವನ್ನೂ ಮಾಡುತ್ತಾರೆ. ಈ ಗುಣವನ್ನು ನಾವು ಬಹಳ ಇಷ್ಟಪಡುತ್ತೇವೆ’ ಎನ್ನುತ್ತಾರೆ.

‘ಇಲ್ಲಿನ ಸಂಸ್ಕೃತಿ ಮತ್ತು ಜೀವನಶೈಲಿ ವಿಭಿನ್ನ. ಇಲ್ಲಿನಷ್ಟು ವೈವಿಧ್ಯತೆಯಲ್ಲಿ ಏಕತೆ ಬೇರೆ ಯಾವ ದೇಶದಲ್ಲೂ ಕಾಣಸಿಗದು. ಆಚರಣೆ, ಸಂಪ್ರದಾಯಗಳೂ ಶ್ರೀಮಂತವಾಗಿವೆ ಎನ್ನುವ ರೀನಾ, ‘ನಾವು ಬೆಂಗಳೂರಿಗೆ ಬಂದಾಗ ಬಾಡಿಗೆ ಮನೆಯೊಂದನ್ನು ಗೊತ್ತು ಮಾಡಿದೆವು. ಮೊದಲ ಬಾರಿಗೆ ಮನೆಗೆ ಪ್ರವೇಶ ಮಾಡಿದಾಗ ಮನೆಯ ಮಾಲಿಕರು ಪೂಜೆ ಮಾಡಿ ನಮಗೆ ಸಿಹಿ ಹಂಚಿದರು. ಇಂತಹ ಘಟನೆ ಹಿಂದೆ ನಾವೆಲ್ಲೂ ನೋಡಿಲ್ಲ. ಇದು ನಮಗೆ ಹೊಸದು ಹಾಗೂ ಸದಾ ಸ್ಮರಣೀಯವೂ ಆಗಿದೆ’ ಎಂದು ಇಲ್ಲಿನ ಪದ್ಧತಿಯನ್ನು ಶ್ಲಾಘಿಸುತ್ತಾರೆ ಈ ದಂಪತಿ.

★ **ಅವನೀಶ್**